ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 65 ಎಲ್ ಡಬ್ಲ್ಯೂಎ 2023

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 27.02.2025

## ಅಧಿಸೂಚನೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 65 ಎಲ್ ಡಬ್ಲ್ಯೂಎ 2023 ದಿನಾಂಕ: 27.02.2025ರಲ್ಲಿ ಕರ್ನಾಟಕ ರಾಜ್ಯದಾದ್ಯಂತ "ಬೀಡಿ ತಯಾರಿಕೆ" ಅನುಸೂಚಿತ ಉದ್ದಿಮೆಯಲ್ಲಿ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ದಿನಾಂಕ: 01.04.2018ರಿಂದ ಅನ್ವಯವಾಗುವಂತೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲಾಗಿರುತ್ತದೆ.

ತದನಂತರ 2018 ರಿಂದ ಐದು ವರ್ಷಗಳು ಪೂರ್ಣಗೊಂಡ ನಂತರ ಪುನಃ 2024 ರಿಂದ "ಬೀಡಿ ತಯಾರಿಕೆ" ಅನುಸೂಚಿತ ಉದ್ದಿಮೆಯಲ್ಲಿ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲು ರಾಜ್ಯ ಸರ್ಕಾರವು ತೀರ್ಮಾನಿಸಿದ್ದು, ಸರ್ಕಾರದ ಆದೇಶ ಸಂಖ್ಯೆ: ಕಾಇ 65 ಎಲ್‌ಡಬ್ಲ್ಯೂಎ 2023 ದಿನಾಂಕ: 20.09.2023 ರ ಮೂಲಕ ಕನಿಷ್ಠ ವೇತನ ಕಾಯ್ದೆ, 1948 ರ ಕಲಂ 5(1)(ಎ) ಸಹವಾಚಿತ ಕಲಂ 9 ರನ್ವಯ ಉಪಸಮಿತಿಯನ್ನು ರಚಿಸಿರುತ್ತದೆ. ಸದರಿ ಉಪ ಸಮಿತಿಯು ದಿನಾಂಕ: 15.03.2024, 21.08.2024 ಹಾಗೂ 11.11.2024 ರಂದು ಸಭೆಗಳನ್ನು ನಡೆಸಿದ್ದು, ಸಭಾ ನಡವಳಿಗಳನ್ನೊಳಗೊಂಡಂತೆ ಸಭೆಗಳಲ್ಲಿ ಚರ್ಚಿಸಿ ವ್ಯಕ್ತವಾದ ಅಭಿಪ್ರಾಯಗಳನ್ನೊಳಗೊಂಡ ವರದಿಯನ್ನು ಕಾರ್ಮಿಕ ಆಯುಕ್ತಾಲಯವು ಸರ್ಕಾರಕ್ಕೆ ಸಲ್ಲಿಸಿರುತ್ತದೆ.

ಗೌರವಾನ್ವಿತ ನ್ಯಾಯಾಲಯದ ನಿರ್ದೇಶನದನ್ವಯ ಬೀಡಿ ಉದ್ದಿಮೆಯ ಆಡಳಿತ ವರ್ಗದವರಾದ ಕರ್ನಾಟಕ ಬೀಡಿ ಇಂಡಸ್ಟ್ರೀಸ್ ಅಸೋಸಿಯೇಷನ್, ಮಂಗಳೂರು ಹಾಗೂ ಕಾರ್ಮಿಕ ಸಂಘಟನೆಗಳಾದ ಮೈಸೂರು ಬೀಡಿ ಮಜ್ದೂರ್ ಸಂಘ (ಬಿ.ಎಂ.ಎಸ್ ಸಂಯೋಜಿತ), ದಿ ಮೈಸೂರು ಬೀಡಿ ಮಜ್ದೂರ್ ಅಸೋಸಿಯೇಷನ್, ಎಐಟಿಯುಸಿ (ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಸಮಿತಿ) ಐಎನ್‌ಟಿಯುಸಿ, ಕರ್ನಾಟಕ ಕರಾವಳಿ ಬೀಡಿ ವರ್ಕರ್ಸ್ ಯೂನಿಯನ್ ಇವರುಗಳು ಮನವಿಯನ್ನು ಸಲ್ಲಿಸಿ ಸದರಿ ಮನವಿಯ ಜೊತೆಗೆ ಮಂಗಳೂರು ಗಣೇಶ ಬೀಡಿ ವರ್ಕ್ಸ್, ಭಾರತ್ ಬೀಡಿ ವರ್ಕ್ಸ್, ಕರ್ನಾಟಕ ಬೀಡಿ ಇಂಡಸ್ಟ್ರೀಸ್ ಅಸೋಸಿಯೇಷನ್ ಹಾಗೂ ಇತರೆ ಕಾರ್ಮಿಕ ಸಂಘಟನೆಗಳಾದ **BMS, HMS, AITUC, INTUC** ಹಾಗೂ **Mysore Beedi Mazdur Sangha** ಪ್ರತಿನಿಧಿಗಳು ಪರಸ್ಪರ ಒಪ್ಪಿ ಸಹಿ ಮಾಡಿರುವ Memorandum of Understanding ನ್ನು ಸಲ್ಲಿಸಿರುತ್ತಾರೆ.

ಸದರಿ ಮನವಿಯಲ್ಲಿ ದೀರ್ಘಕಾಲದಿಂದ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣಗಳು ಬಾಕಿ ಉಳಿದಿರುವ ಕಾರಣ 2018 ರಲ್ಲಿ ಪರಿಷ್ಕರಣೆಯಾದ ಕನಿಷ್ಟ ವೇತನ ದರಗಳು ಜಾರಿಗೆ ಬಂದಿರುವುದಿಲ್ಲ. ಈ ಕಾರಣದಿಂದ ಉಭಯತ್ರರರು ಒಪ್ಪಿರುವ ಕನಿಷ್ಟ ವೇತನ ಹಾಗೂ ವ್ಯತ್ಯಸ್ಥ ತುಟ್ಟಿಭತ್ಯೆ ಪ್ರತಿ ಅಂಶಕ್ಕೆ ನಾಲ್ಕು ಪೈಸೆಗೆ ಬದಲಾಗಿ ಮೂರು ಪೈಸೆಯಂತೆ ಲೆಕ್ಕಾಚಾರ ಮಾಡುವಂತೆ ಕೋರಿರುತ್ತಾರೆ. ಅಲ್ಲದೇ, ದಿನಾಂಕ: 17.01.2025 ರಂದು ಸಲ್ಲಿಸಿರುವ ಮನವಿಯಲ್ಲಿ ವ್ಯತ್ಯಸ್ಥ ತುಟ್ಟಿಭತ್ಯೆ ಲೆಕ್ಕಾಚಾರಕ್ಕಾಗಿ ಇತರೆ ಉದ್ದಿಮೆಗಳಲ್ಲಿ ದೈನಂದಿನ ವಿ.ಡಿ.ಎ. ಲೆಕ್ಕಾಚಾರ ಮಾಡುವಂತೆ ಸಿ.ಪಿ.ಐ. ಅಂಶಗಳು x ವಿ.ಡಿ.ಎ. ದರ x 30 / 26 ಸೂತ್ರದಲ್ಲಿ ಲೆಕ್ಕಾಚಾರ ಮಾಡದೇ ಬೀಡಿ ಸುತ್ತುವ ಹಾಗೂ ಲೇಬಲಿಂಗ್ ಕೆಲಸಗಳು ತುಂಡು ಆಧಾರದ ಕೆಲಸಗಳಾಗಿದ್ದು, ಬಿಡುವಿನ ವೇಳೆಯಲ್ಲಿ ಮಾಡುವುದಾಗಿರುವುದರಿಂದ ವಿ.ಡಿ.ಎ. ಲೆಕ್ಕಾಚಾರವನ್ನು ಸಿ.ಪಿ.ಐ. ಅಂಶಗಳು x ವಿ.ಡಿ.ಎ. ದರ ಸೂತ್ರದ ಆಧಾರದಲ್ಲಿ ಲೆಕ್ಕಾಚಾರ ಮಾಡುವಂತೆ ಕೋರಿರುತ್ತಾರೆ.

ರಿಟ್ ಅರ್ಜಿ ಸಂಖ್ಯೆ: 40387/2018ರಲ್ಲಿ ಗೌರವಾನ್ವಿತ ನ್ಯಾಯಾಲಯವು ನೀಡಿರುವ ನಿರ್ದೇಶನದನ್ವಯ ಕರ್ನಾಟಕ ಬೀಡಿ ಇಂಡಸ್ಟ್ರೀಸ್ ಅಸೋಸಿಯೇಷನ್, ಮಂಗಳೂರು ಇವರು ಸಲ್ಲಿಸಿರುವ ಮನವಿ ಹಾಗೂ ಸರ್ಕಾರವು ರಚಿಸಿದ್ದ ಉಪಸಮಿತಿಯು ನೀಡಿರುವ ಸಲಹೆ/ ಶಿಫಾರಸ್ಸುಗಳನ್ನು ಹಾಗೂ ಕಾರ್ಮಿಕ – ಮಾಲೀಕ ಹಂತದಲ್ಲಿ ನಡೆದ ಸಭೆಗಳಲ್ಲಿ ಚರ್ಚಿಸಿ ಪರಸ್ಪರ ಒಮ್ಮತಕ್ಕೆ ಬಂದು ಬೀಡಿ ಉದ್ದಿಮೆಯಲ್ಲಿ ತೊಡಗಿಸಿಕೊಂಡಿರುವ ಕಾರ್ಮಿಕ ಸಂಘಟನೆಗಳು ಹಾಗೂ ಮಾಲೀಕ ವರ್ಗದವರು ದಿನಾಂಕ: 26.10.2024ರಂದು ಜಂಟಿಯಾಗಿ ಸಹಿ ಮಾಡಿಕೊಂಡಿರುವ **Memorandam of Understanding** ನಲ್ಲಿನ ಅಂಶಗಳನ್ನು ಪರಿಗಣಿಸಿ ಸರ್ಕಾರವು ದಿನಾಂಕ: 01.04.2024ರಿಂದ ಅನ್ವಯವಾಗುವಂತೆ "ಬೀಡಿ ತಯಾರಿಕೆ" ಅನುಸೂಚಿತ ಉದ್ದಿಮೆಗೆ ಸಂಬಂಧಿಸಿದಂತೆ ಈ ಕೆಳಕಂಡ ಕನಿಷ್ಠ ವೇತನ ದರಗಳ ಕೋಷ್ಟಕದಲ್ಲಿರುವಂತೆ ಕನಿಷ್ಠ ವೇತನ ದರಗಳನ್ನು ಈ ಅಧಿಸೂಚನೆಯ ಮೂಲಕ ಪರಿಷ್ಕರಿಸಲಾಗಿರುತ್ತದೆ.

ಈ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ಪಾವತಿಸಲು, ಕನಿಷ್ಠ ವೇತನ ಕಾಯ್ದೆ-1948ರ ಕಲಂ 12 ರನ್ವಯ ಸಂಬಂಧಿಸಿದ ಎಲ್ಲಾ ಉದ್ಯೋಗದಾತರು ಬಾಧ್ಯಸ್ಥರಾಗಿರುತ್ತಾರೆ.

| ಕ್ರ. ಸಂ | ಕೆಲಸದ ವರ್ಗಗಳು | ಕನಿಷ್ಠ ವೇತನ ದರ (ರೂಪಾಯಿಗಳಲ್ಲಿ) |
|---|---|---|
| 1 | ಪ್ರತಿ ಸಾವಿರ ಬೀಡಿ ಸುತ್ತಲು [ಗೃಹ ಕೆಲಸಗಾರರೂ ಸೇರಿದಂತೆ] | ರೂ. 270/- |
| 2 | ಬೀಡಿ ಲೇಬಲಿಂಗ್ ಮಾಡುವುದು [ಗೃಹ ಕೆಲಸಗಾರರು ಸೇರಿದಂತೆ] [ಪ್ರತಿ ಐವತ್ತು ಸಾವಿರ ಬೀಡಿಗಳನ್ನು ಕಟ್ಟಲು] | ರೂ. 275/- |
| 3 | ಅತಿ ಕುಶಲ ಕಾರ್ಮಿಕರು: ಪ್ರತಿ ತಿಂಗಳಿಗೆ | |
| | ಮ್ಯಾನೇಜರ್ | ರೂ. 20,500/- |
| | ಅಸಿಸ್ಟೆಂಟ್ ಮ್ಯಾನೇಜರ್ | ರೂ. 19,500/- |
| 4 | ಕುಶಲ ಕಾರ್ಮಿಕರು: (ಪ್ರತಿ ತಿಂಗಳಿಗೆ) | |
| | ತಂಬಾಕು ಮಿಶ್ರಣ ಮಾಡುವ ಕುಶಲ ಕಾರ್ಮಿಕರು | |
| | ಕ್ಯಾಷಿಯರ್ | ರೂ. 18,500/- |
| | ಅಕೌಂಟೆಂಟ್ | |
| | ಶೀಘ್ರಲಿಪಿಗಾರ/ಕಂಪ್ಯೂಟರ್ ಆಪರೇಟರ್ | |
| | ಬೆರಳಚ್ಚುಗಾರ/ಡಾಟಾ ಎಂಟ್ರಿ ಆಪರೇಟರ್ | |
| | ಗುಮಾಸ್ತ/ಕ್ಲರ್ಕ್ [ಪದವೀಧರ] | |
| | ಲಾರಿ/ವ್ಯಾನು/ ಕಾರು/ಜೀಪ್ ಚಾಲಕ | |
| 4 | ಅರೆಕುಶಲ ಕಾರ್ಮಿಕರು: (ಪ್ರತಿ ತಿಂಗಳಿಗೆ) | ರೂ. 17,500/- |
| | ಫ್ಲೋರ್‌ಮನ್ / ಬೀಡಿ ಚಕ್ಕರ್ | |
| | ಸ್ಟೋರ್ ಕೀಪರ್ | |
| | ಎರಡನೇ ದರ್ಜೆ ಗುಮಾಸ್ತ [ಪದವೀಧರರಲ್ಲದವರು] | |
| 5 | ಅಕುಶಲ ಕಾರ್ಮಿಕರು: (ಪ್ರತಿ ತಿಂಗಳಿಗೆ) | ರೂ. 16,500/- |
| | ಎಲೆ ಹಾಗೂ ತಂಬಾಕು ಹಂಚುವವ | |
| | ಸಿಗಡಿ ವರ್ಕರ್/ಭಟ್ಟಿವಾಲ/ತರಾಯಿವಾಲ | |
| | ಭರ್ತಿ ಮಾಡುವವ ಮತ್ತು ಭರ್ತಿ ತೆಗೆಯುವವ [ಲೋಡಿಂಗ್ ಮತ್ತು ಅನ್ ಲೋಡಿಂಗ್ ಮಾಡುವವರು] | |
| | ವಾಹನ ಕ್ಲೀನರ್ | |
| | ಆಫೀಸ್ ಬಾಯ್/ ಪ್ಯೂನ್ / ವಾಚ್‌ಮನ್/ ಅಟೆಂಡರ್ | |

ಮೇಲ್ಕಂಡ ಕೋಷ್ಟಕದಲ್ಲಿಯ ಪರಿಷ್ಕೃತ ಕನಿಷ್ಠ ವೇತನ ದರಗಳನ್ನು ರಾಜ್ಯ ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನಿಗದಿಪಡಿಸಿದ್ದು, ಈ ಎಲ್ಲಾ ಷರತ್ತುಗಳನ್ನು ಯಥಾವತ್ತಾಗಿ ಸಂಬಂಧಿಸಿದ ಉದ್ಯೋಗದಾತರು ಪಾಲಿಸಲು ಬಾಧ್ಯಸ್ಥರಿರುತ್ತಾರೆ;

1. ವ್ಯತ್ಯಾಸವಾಗುವ ತುಟ್ಟಿಭತ್ಯೆ:-

ತುಟ್ಟಿಭತ್ಯೆ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಹಿಂದಿನ ಕ್ಯಾಲೆಂಡರ್ ವರ್ಷದ ಹನ್ನೆರಡು (12) ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ಸರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರತಿ ವರ್ಷ ಲೆಕ್ಕಾಚಾರ ಮಾಡತಕ್ಕದ್ದು. ಅಲ್ಲದೇ ಗ್ರಾಹಕ ಬೆಲೆ ಸೂಚ್ಯಂಕಗಳ ಸಂಖ್ಯೆಯ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಗ್ರಾಹಕ ಬೆಲೆ ಸೂಚ್ಯಾಂಕ 8901 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ ಮೂರು (3) ಪೈಸೆಯಂತೆ ತುಟ್ಟಿ ಭತ್ಯೆಯನ್ನು ಪಾವತಿಸತಕ್ಕದ್ದು.

ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:-

ಅ) ಮಾಸಿಕ ವೇತನವನ್ನು ಪಡೆಯುವವರು:-

ತಿಂಗಳ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x 30 ದಿನಗಳು

ದಿನಗೂಲಿ ಗಳಿಕೆದಾರರ ಸಂದರ್ಭದಲ್ಲಿ ಮಾಸಿಕ ವೇತನ ದರಗಳನ್ನು ಇಪ್ಪತ್ತಾರು (26) ದಿನಗಳಿಂದ ವಿಭಾಗಿಸಿ, ನಾಲ್ಕು (4) ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿದಂತೆ ಈ ಕೆಳಕಂಡಂತೆ ಲೆಕ್ಕ ಹಾಕತಕ್ಕದ್ದು. ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸುವುದು.

ಆ) ದಿನಗೂಲಿ ವೇತನ ಪಡೆಯುವವರು :-

ದಿನದ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಂಶಗಳು x ತುಟ್ಟಿಭತ್ಯೆಯ ದರ x 30 ದಿನಗಳು

2. ಮಹಿಳೆಯರು, ಪುರುಷರು ಮತ್ತು ತೃತೀಯ ಲಿಂಗಿಗಳು ಒಂದೇ ರೀತಿಯ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಎಲ್ಲರಿಗೂ ಸಮಾನ ದರದ ವೇತನಗಳನ್ನು ಸಂದಾಯ ಮಾಡತಕ್ಕದ್ದು.
3. ಅಧಿಸೂಚನೆಯಲ್ಲಿ ವರ್ಗವನ್ನು ನಮೂದಿಸದೆ ಇರುವ ವರ್ಗಗಳ ಕಾರ್ಮಿಕರಿಗೆ ಅದೇ ಸ್ವರೂಪದ ಕೆಲಸ ನಿರ್ವಹಿಸುತ್ತಿರುವ ಇತರೆ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಸಂದಾಯ ಮಾಡತಕ್ಕದ್ದು.
4. ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ 8 ಗಂಟೆಗಳ ಕೆಲಸದ ವೇತನವು ಅದೇ ತರಹದ ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರಕೂಡದು. ಒಂದು ದಿನದ ಕೆಲಸ ಎಂದರೆ 8 ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು 8 ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಂತಹ ಕಡಿಮೆ ಅವಧಿಗೆ ಅನುಗುಣವಾಗಿ ವೇತನವನ್ನು ಆ ವರ್ಗದ ದಿನದ ಅಥವಾ ತಿಂಗಳ ವೇತನದ ಆಧಾರದ ಮೇಲೆ ಲೆಕ್ಕ ಹಾಕುವುದು.
5. ದಿನಗೂಲಿ ನೌಕರರಿಗೆ ಅವರ ದಿನದ ವೇತನ ದರಗಳನ್ನು ಕಂಡು ಹಿಡಿಯಬೇಕಾದಲ್ಲಿ ತಿಂಗಳ ವೇತನ ದರವನ್ನು 26 ದಿನಗಳಿಂದ ಭಾಗಿಸಬೇಕು. ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸುವುದು.
6. ಸಂಸ್ಥೆಯಲ್ಲಿ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯ್ದೆ ಮತ್ತು ನಿಯಮಗಳಿಗೆ ಒಳಪಟ್ಟು ಸಾಮಾನ್ಯ ವೇತನದ ಎರಡು ಪಟ್ಟು ವೇತನವನ್ನು ಪಾವತಿ ಮಾಡತಕ್ಕದ್ದು.
7. ಕೆಲಸಗಾರರು ದಿನದ ನಿಗದಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಹೆಚ್ಚುವರಿ ಅವಧಿ ಕೆಲಸಕ್ಕೆ ಆತನ ವೇತನದ ಎರಡು ಪಟ್ಟು ವೇತನವನ್ನು ಪಾವತಿಸತಕ್ಕದ್ದು.
8. ವೇತನ ಲೆಕ್ಕಾಚಾರದಲ್ಲಿ ಚಿಲ್ಲರೆ ಬಂದ ಪಕ್ಷದಲ್ಲಿ ಅದನ್ನು ಸಮೀಪದ 50 ಪೈಸೆಗೆ ಪೂರ್ಣಗೊಳಿಸುವುದು.
9. ನೌಕರರುಗಳ ವೇತನವನ್ನು ಚೆಕ್ ಮೂಲಕ ಪಾವತಿಸುವುದು ಅಥವಾ ನೌಕರರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡತಕ್ಕದ್ದು.
10. ಈ ಅಧಿಸೂಚನೆಯಲ್ಲಿ ನಮೂದಿಸಿದ ಉದ್ಯೋಗಿಗಳನ್ನು ನಾಲ್ಕು ಪ್ರವರ್ಗಗಳನ್ನಾಗಿ ವಿಂಗಡಿಸಿದ್ದು, ಪ್ರತಿ ಪ್ರವರ್ಗದ ವ್ಯಾಖ್ಯಾನವು ಕೆಳಗಿನಂತಿರುತ್ತದೆ;

i. ಅಕುಶಲ ಕಾರ್ಮಿಕರು (Un-skilled Workers): ಅಕುಶಲ ಕಾರ್ಮಿಕರೆಂದರೆ ದೈಹಿಕ ಶ್ರಮದ ಆಧಾರದ ಮೇಲೆ ಕೆಲಸ ನಿರ್ವಹಿಸುವ ಕಾರ್ಮಿಕರಾಗಿದ್ದು, ವೈಯಕ್ತಿಕ ನಿರ್ಣಯ ಹಾಗೂ ಪೂರ್ವ ಅನುಭವದ ಅವಶ್ಯಕತೆಯಿಲ್ಲದ ಸರಳ ಕರ್ತವ್ಯವನ್ನು ನಿರ್ವಹಿಸುವ ಕಾರ್ಮಿಕರಾಗಿರುತ್ತಾರೆ. ಉದ್ಯೋಗ / ವೃತ್ತಿಯ ಪರಿಸರದ ಪರಿಚಯ ಮತ್ತು ದೈಹಿಕ ಶ್ರಮ ಇಲ್ಲಿ ಮುಖ್ಯ ಅಂಶವಾಗಿರುತ್ತದೆ.

ii. ಅರೆ ಕುಶಲ ಕಾರ್ಮಿಕರು (Semi Skilled Workers): ಅರೆ ಕುಶಲ ಕಾರ್ಮಿಕರೆಂದರೆ ವೈಯಕ್ತಿಕ ನಿರ್ಣಯಕ್ಕೆ ಹೆಚ್ಚು ಅವಕಾಶವಿಲ್ಲದ ನಿರ್ದಿಷ್ಟ ನಿಯತ ಕ್ರಮದ ಪುನರಾವರ್ತನೆಯ ಕೆಲಸಗಳನ್ನು ನಿರ್ವಹಿಸುವ ಕಾರ್ಮಿಕರಾಗಿರುತ್ತಾರೆ. ಕಾರ್ಮಿಕರ ಕೆಲಸವು ನಿರ್ದಿಷ್ಟ ಮಿತಿಯನ್ನು ಹೊಂದಿದ್ದು, ಇನ್ನೊಬ್ಬ ವ್ಯಕ್ತಿಯ ತೀರ್ಮಾನಕ್ಕೆ ಅನುಗುಣವಾಗಿ ನಿರ್ವಹಿಸುವ ಕೆಲಸವಾಗಿರುತ್ತದೆ ಹಾಗೂ ಯಂತ್ರಗಳ ಸಹಾಯದಿಂದ ನಿರ್ವಹಿಸುವ ಸರಳ ಕೆಲಸಗಳನ್ನು ಮಾಡುವವರಾಗಿರುತ್ತಾರೆ.

iii. ಕುಶಲ ಕಾರ್ಮಿಕರು (Skilled Workers): ಕುಶಲ ಕಾರ್ಮಿಕರು ತಮ್ಮ ಸ್ವಂತ ನಿರ್ಣಯ, ತೀರ್ಮಾನ ಮತ್ತು ವಿವೇಚನೆಗೆ ಒಳಪಟ್ಟು ಜವಾಬ್ದಾರಿಯುತ ಕರ್ತವ್ಯಗಳನ್ನು ನಿರ್ವಹಿಸುವ ಕಾರ್ಮಿಕರಾಗಿರುತ್ತಾರೆ. ತಮ್ಮ ವೃತ್ತಿ ಮತ್ತು ಉದ್ಯೋಗದ ಬಗ್ಗೆ ಆಳವಾದ ಮತ್ತು ಅಮೂಲಾಗ್ರ ಜ್ಞಾನವನ್ನು ಹೊಂದಿದ ಕಾರ್ಮಿಕರಾಗಿರುತ್ತಾರೆ. ಸದರಿ ಉದ್ಯೋಗ ಮತ್ತು ವೃತ್ತಿಯ ಬಗ್ಗೆ ವಿದ್ಯಾರ್ಹತೆ ಪರಿಣಿತಿ ಮತ್ತು ಅನುಭವ ಹೊಂದಿರುತ್ತಾರೆ.

iv. ಅತಿ ಕುಶಲ ಕಾರ್ಮಿಕರು (Highly Skilled Workers): ಅತಿ ಕುಶಲ ಕಾರ್ಮಿಕರೆಂದರೆ ಕರ್ತವ್ಯವನ್ನು ನಿರ್ವಹಿಸಲು ದಕ್ಷತೆ ಮತ್ತು ಅತೀವ ಸಾಮರ್ಥ್ಯ ಇರುವ ಕಾರ್ಮಿಕರಾಗಿದ್ದು, ಕುಶಲ ಕಾರ್ಮಿಕರ ಸಹಿತ ಎಲ್ಲಾ ಕಾರ್ಮಿಕರ ಕರ್ತವ್ಯಗಳ ಮೇಲ್ವಿಚಾರಣೆ ನಡೆಸಿ ಪರಿಣಾಮಕಾರಿಯಾಗಿ ಫಲಿತಾಂಶವನ್ನು ಸಾಧಿಸಲು ಶಕ್ತರಾಗಿರುವ ಕಾರ್ಮಿಕರಾಗಿರುತ್ತಾರೆ ಹಾಗೂ ಸದರಿ ಉದ್ಯೋಗ ಮತ್ತು ವೃತ್ತಿಯ ಬಗ್ಗೆ ವಿಶೇಷ ಜ್ಞಾನ ಮತ್ತು ಪರಿಣಿತಿಯನ್ನು ಹೊಂದಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

A Umadevi
27/2/2025

(ಎ. ಉಮಾದೇವಿ)
ಪೀಠಾಧಿಕಾರಿ-2,
ಕಾರ್ಮಿಕ ಇಲಾಖೆ (ಕನಿಷ್ಠ ವೇತನ)

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಈ ಅಧಿಸೂಚನೆಯನ್ನು ಇ - ರಾಜ್ಯಪತ್ರದಲ್ಲಿ (E-Gazzette) ಪ್ರಕಟಿಸಲು ಕೋರಲಾಗಿದೆ.

1. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟರಸ್ತೆ, ಬೆಂಗಳೂರು-29.
2. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ (ಕಾರ್ಮಿಕ ಆಯುಕ್ತರ ಮೂಲಕ).

3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು (ಕಾರ್ಮಿಕ ಆಯುಕ್ತರ ಮೂಲಕ).
4. ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ವಾರ್ತಾ ಭವನ, ಇನ್ ಫೆಂಟ್ರಿ ರಸ್ತೆ, ಬೆಂಗಳೂರು
5. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ, ಕಾರ್ಮಿಕ ಇಲಾಖೆ, ಕಾರ್ಮಿಕ ಭವನ, ಬನ್ನೇರುಘಟ್ಟರಸ್ತೆ, ಬೆಂಗಳೂರು-29.
6. ಎಲ್ಲಾ ಜಿಲ್ಲೆಗಳ ಕಾರ್ಮಿಕ ಅಧಿಕಾರಿಗಳಿಗೆ (ಕಾರ್ಮಿಕ ಆಯುಕ್ತರ ಮೂಲಕ)
7. ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿ.

<u>ಪ್ರತಿಗಳು:</u>

1. ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ಕಾರ್ಮಿಕ ಇಲಾಖೆ, ಬೆಂಗಳೂರು.